ಏವಿಯೇಷನ್ ಗಾಲ್ಫ್ ಮೈದಾನ			2007 ದಿನಾಂಕ: 31.05.2007
ಹಾಸನ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ	ಭುವನಹಳ್ಳಿ ಮತ್ತು ಇತರೆ	446–00	ಸಿಐ 726 ಎಸ್‌ಪಿಕ್ಯೂ 2007 ದಿನಾಂಕ: 05.10.2007
	ಒಟ್ಟು	**1021–07**	

ಕೈಗಾರಿಕಾ ಪ್ರದೇಶಗಳಲ್ಲಿ ಯಾವ ಕೈಗಾರಿಕೆಗಳು ಬರುತ್ತವೆ ಎಂದು ಮೊದಲೇ ಹೇಳುವುದು ಕಷ್ಟ. ಯಾವುದೇ ಹೂಡಿಕೆದಾರರು ಮುಂದೆ ಬಂದಲ್ಲಿ ಅವರ ಯೋಜನೆಗಳನ್ನು ಪರಿಶೀಲಿಸಿ, ಅಗತ್ಯವಿರುವ ಜಮೀನು ಹಂಚಿಕೆ ಮಾಡಲಾಗುವುದು.

ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ ಹಾಗೂ ಅಂಗವಿಕಲ ಯೋಜನೆಗಳ ಬಗ್ಗೆ

656 (1056) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ ಹಾಗೂ ಅಂಗವಿಕಲ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಮಾರ್ಗಸೂಚಿಗಳೇನು (ಪ್ರತಿಯನ್ನು ಒದಗಿಸುವುದು).

ಆ) ಮೇಲ್ಕಂಡ ಯೋಜನೆಗಳಿಗಾಗಿ 2009–10 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಸದರಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿದ ಎಷ್ಟು ಜನರಿಗೆ ಈ ಸೌಲಭ್ಯವನ್ನು ನೀಡಬೇಕಾಗಿತ್ತು ಹಾಗೂ ರಾಜ್ಯ ಸರ್ಕಾರವು ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ;

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ ಹಾಗೂ ಅಂಗವಿಕಲ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಮಾರ್ಗಸೂಚಿಗಳ ಪ್ರಗತಿಯನ್ನು ಲಗತ್ತಿಸಿದೆ.

ಆ) ಮೇಲ್ಕಂಡ ಯೋಜನೆಗಳಿಗಾಗಿ 2009–10 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರೂ.311.67 ಕೋಟಿಗಳು ಮತ್ತು ರಾಜ್ಯ ಸರ್ಕಾರ ದಿಂದ ರೂ.1690.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ವಿವರವನ್ನು ಅನುಬಂಧ– ರಲ್ಲಿ ಲಗತ್ತಿಸಿದೆ.

ಇ) ಸದರಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ಒಟ್ಟು 11.68 ಲಕ್ಷ ಫಲಾನುಭವಿಗಳನ್ನು ರೂ.200 ಗಳ ಮಾಸಾಶನ ಸೌಲಭ್ಯವನ್ನು ನೀಡಲು ತಿಳಿಸಿರುತ್ತದೆ. ಹಾಗೂ ರಾಜ್ಯ ಸರ್ಕಾರವು ಒಟ್ಟು 35.15 ಲಕ್ಷ ಫಲಾನುಭವಿಗಳಿಗೆ ಮಾಸಾಶನವನ್ನು ನೀಡುತ್ತಿರುತ್ತದೆ. ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಅನುಬಂಧ – 1

(ರೂ.ಕೋಟಿಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಬಿಡುಗಡೆ ಮಾಡಲಾದ ಅನುದಾನ		ಕೇಂದ್ರ ಸರ್ಕಾರ ನಿಗಧಿ ಪಡಿಸಿರುವ ಫಲಾನುಭವಿಗಳ ಸಂಖ್ಯೆ (ಲಕ್ಷಗಳು)	ರಾಜ್ಯದಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿರುವ ಫಲಾನುಭವಿಗಳ ಸಂಖ್ಯೆ
		ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ		
1	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ	311.67	425.00	8.11	8,33,532
2	ನಿರ್ಗತಿಕ ವಿಧವಾ ವೇತನ		465.00	2.95	10,12,686
3	ಅಂಗವಿಕಲ ವೇತನ		385.00	0.62	6,33,280
4	ಸಂಧ್ಯಾ ಸುರಕ್ಷಾ ಯೋಜನೆ	00	415.00	—	10,35,814
	ಒಟ್ಟು	**311.67**	**1690.00**	**11.68**	**35,15,312**